**ದಿನಾಂಕ 26/02/2024 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಶ್ರೀ ಎಂ.ಎಲ್.ಡಿ ವಕೀಲರಿಂದ**

ನನಗೆ ಮಂಜುನಾಥ ಪರಿಚಯುಸ್ಥರಾಗಿರುತ್ತಾರೆ. ಸದರಿ ಮಂಜುನಾಥ ರವರು ನಮ್ಮ ಪಕ್ಕದೂರಿನವರಾಗಿರುತ್ತಾರೆ. ಮಂಜುನಾಥ ರವರು ಗುಂಜೇವು ಗ್ರಾಮಕ್ಕೆ ಸೇರಿದವರಾಗಿರುತ್ತಾರೆ. ಹೊಳೆನರಸೀಪುರ ತಾಲ್ಲೂಕಿನವರಾಗಿರುತ್ತಾರೆ. ಆರೋಪಿ ಮಂಜುನಾಥನ ಮುಖಾಂತರವೇ ನನಗೆ ಪರಿಚಯ ಆಗಿದ್ದು ಎಂದರೆ ಸರಿ. ನೇರ ಪರಿಚಯ ಇಲ್ಲ ಎಂದರೆ ಸರಿ.

2. ದಿಃ 10.08.2014 ಹಣಕಾಸಿನ ವ್ಯವಹಾರವನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರ ಆಗಿರುವುದಿಲ್ಲ. ಆರೋಪಿಯನ್ನು ಭೇಟಿಯಾಗುವ ಮುನ್ನಾ ಏನು ಕೆಲಸ ಮಾಡುತ್ತಿದ್ದರು ಎನ್ನುವ ಮಾಹಿತಿ ನನಗಿಲ್ಲ ಎಂದರೆ ಸರಿ. ಆರೋಪಿಯ ಕುಟುಂಬ ಸದಸ್ಯರು ಏನು ಕೆಲಸ ಮಾಡುತ್ತಿದ್ದರು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಆದೇ ದಿನದಂದು ಆರೋಪಿಯ ಮನೆಯವರ ಮಾಹಿತಿ ಪಡೆದುಕೊಳ್ಳಲು ಅದೇ ದಿನ ನನಗೆ ಯಾವುದೇ ತೊಂದರೆ ಇರಲಿಲ್ಲ. ಆರೋಪಿಯ ಬಗ್ಗೆ ಮಾಹಿತಿ ಎಲ್ಲವನ್ನೂ ಅದೇ ದಿನ ಕೇಳಿ ತಿಳಿದುಕೊಂಡಿದ್ದೆನು. ಉದ್ದೇಶಪೂರ್ವಕವಾಗಿಯೇ ಈ ಮಾಹಿತಿಯನ್ನು ನಾನು ಪಡೆದುಕೊಂಡೆನು. 10.08.2014 ರಂದು ಆರೋಪಿ ತನ್ನ ದರದ್ದು ಹೇಳಿಕೊಂಡು ಹಣ ಕೇಳಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ಆ ದಿನವೇ ಹಣ ಕೇಳಿದರು ಎಂದು. 10.08.2014 ರಂದು ಆರೋಪಿ ನನ್ನನ್ನು ಮೊದಲ ಬಾರಿಗೆ ಭೇಟಿ ಮಾಡಿದ ಕಾರಣ ಯಾವುದೇ ಸಾಲ ಕೇಳುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸರಿಯಲ್ಲ.

3. ಆರೋಪಿಯಿಂದ ಆತ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ಕೇಳಲಿಲ್ಲ. ಆರೋಪಿಗೆ ಹಣವನ್ನು 13.08.2014 ರಂದು ಕೊಟ್ಟೆನು. ಆರೋಪಿಗೆ ಹಣವನ್ನು ಟೀ ಅಂಗಡಿಯೊಂದರಲ್ಲಿ ಕೊಟ್ಟೆನು. ಆರೋಪಿಗೆ ಹಣವನ್ನು ರಾಜೇಶ್ ಟೀ ಅಂಗಡಿಯಲ್ಲಿ ಕೊಟ್ಟೆನು. ರಾಜೇಶ್ ರವರ ಬಗ್ಗೆ ನನಗೇನು ಗೊತ್ತಿಲ್ಲ. ಸದರಿ ದಿನದಂದು 2,50,000/-ಹಣವನ್ನು ನಾನು ಕೊಟ್ಟೆನು. ನಾನು ಆರೋಪಿಗೆ ಹಣವನ್ನು 500 ರೂ. ಮುಖಬೆಲೆಯ ನೋಟುಗಳಲ್ಲಿ ಕೊಟ್ಟೆನು. 500 ನೋಟುಗಳನ್ನು ಆರೋಪಿಗೆ ಕೊಟ್ಟಿದ್ದೆನು. ಸದರಿ ಹಣ ನನ್ನ ಮನೆಯಲ್ಲಿಯೇ ಇದ್ದು ಅದನ್ನೇ ಆರೋಪಿಗೆ ಕೊಟ್ಟಿದ್ದೇನೆ. ಯಾವಾಗಲೂ ನಿಮ್ಮ ಮನೆಯಲ್ಲಿ ಹಣ ಕೂಡಿಟ್ಟುಕೊಂಡಿರುತ್ತೀರಿ ಎಂದು ಸೂಚಿಸಲು ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. 2 ವರೆ ಲಕ್ಷ ಹಣ ನನಗೆ ಬಂದ ಆದಾಯದಲ್ಲಿ ಆಗಿತ್ತು. ಯಾವ ಮೂಲದಿಂದ ಸದರಿ ಆದಾಯಬಂತೆಂಬುದರ ಬಗ್ಗೆ ಯಾವುದೇ ದಾಖಲೆ ನ್ಯಾಯಾಲಯಕ್ಕೆ ನೀಡಿಲ್ಲ. ಅದರ ಬಗ್ಗೆ ದಾಖಲೆ ನೀಡಲು ನನಗೆ ಯಾವುದೇ ಸಮಸ್ಯೆ ಇಲ್ಲ. ಆರೋಪಿಗೆ ಯಾವುದೇ ಹಣವನ್ನೇ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮಂಜುನಾಥನಿಗೂ ಆರೋಪಿಗೂ ಹಣದ ವ್ಯವಹಾರವಾಗಿದ್ದು ಸದರಿ ಮಂಜುನಾಥನು ನನ್ನ ಕೈಯಲ್ಲಿ ಆರೋಪಿ ನನ್ನಿಂದ ಯಾವುದೇ ಸಾಲ ಪಡೆಯದೇ ಇದ್ದರೂ ಈ ಸುಳ್ಳು ಫಿರ್ಯಾದನ್ನು ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ರಾಜೇಶ್ ಟೀ ಅಂಗಡಿಯಲ್ಲಿ ಆರೋಪಿಗೆ ಹಣ ನೀಡಿದ ಬಗ್ಗೆ ಯಾವುದೇ ನಮೂದು ಇಲ್ಲ. ಆರೋಪಿ ನನ್ನನ್ನು ಎಲ್ಲಿ ಭೇಟಿಯಾದರು ಎಂಬುದರ ಬಗ್ಗೆಯಾಗಲೀ ಹಣವನ್ನು ಎಲ್ಲಿ ಪಡೆದರು ಎಂಬುದರ ಬಗ್ಗೆಯಾಗಲೀ ಫಿರ್ಯಾದಿನಲ್ಲಿ ನಮೂದಿಲ್ಲ. ಆ ರೀತಿ ನಮೂದು ಮಾಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ.

4. ಹಣಕೊಡಬೇಕಾದರೆ ಮಂಜುನಾಥ ಉಪಸ್ಥಿತರಿದ್ದರು. ಹಣವನ್ನು ಮಂಜುನಾಥನಿಗೆ ಕೊಟ್ಟಿರೇ ಎಂದು ಪ್ರಶ್ನಿಸಲು ಸಾಕ್ಷಿ ಹೇಳುತ್ತಾರೆ ಆರೋಪಿಗೇ ಕೊಟ್ಟೆನು ಎಂದು. ಮಂಜುನಾಥನ ಮುಖಾಂತರ ವ್ಯವಹಾರ ಮಾಡಿದೆನೆಂದು ಫಿರ್ಯಾದಿನಲ್ಲಿ ಅಥವಾ ಮುಖ್ಯ ವಿಚಾರಣಾ ಪತ್ರದಲ್ಲಿ ನಮೂದು ಮಾಡಿಲ್ಲ.. ಈ ಅಂಶವನ್ನು ನಮೂದು ಮಾಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. 13.08.2014 ವಾರದ ಯಾವ ದಿನವಾಗಿರುತ್ತದೆ ಎಂದು ನನಗೆ ಈಗ ಹೇಳಲಾಗುವುದಿಲ್ಲ. ನಾನು ಆರೋಪಿಗೆ ಹಣ ನೀಡಿದ ನಂತರ ಅವರು ನನಗೆ ಚೆಕ್ಕೊಂದನ್ನು ಕೊಟ್ಟರು. ಚೆಕ್ಕನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ಚೆಕ್ಕು ಆರೋಪಿಯ ಖಾತೆಗೆ ಸಂಬಂಧಿಸಿದ್ದು ಎಂದು ಪರಿಶೀಲನೆ ಮಾಡಿರುತ್ತೇನೆ. ಸಹಿಯೂ ಆರೋಪಿಯದ್ದೇ ಎಂದು ಪರಿಶೀಲನೆ ಮಾಡಿರುತ್ತೇನೆ. ಛೆಕನ್ನು ಬ್ಯಾಂಕಿಗೆ ಹಾಕುವ ಮುನ್ನಾ ನೀವೇ ಬರೆದು ಹಾಕಿದಿರೇ ಅಥವಾ ಬೇರೆಯವರ ಕೈಯಲ್ಲಿ ಬರೆಸಿ ಹಾಕಿದಿರೇ ಎಂದು ಪ್ರಶ್ನಿಸಲು ಸಾಕ್ಷಿ ಹೇಳುತ್ತಾರೆ ಆರೋಪಿ ಮುಂಚಿತವಾಗಿಯೇ ಬರೆದುಕೊಟ್ಟಿದ್ದರು ಎಂದು. ಆರೋಪಿ ಹಣ ಪಡೆದ ದಿನವೇ ದಿನಾಂಕ ನಮೂದು ಮಾಡಿ ಸಹಿ ಹಾಕಿ ನನಗೆ ಕೊಟ್ಟಿದ್ದರು. ಆರೋಪಿಯಿದ ಆತನ ಪಾಸ್ ಬುಕ್ ಅಥವಾ ಅಕೌಂಟ್ ನಂಬರ್ ನಾನು ಪಡೆದುಕೊಳ್ಳಲಿಲ್ಲ. ನಾನು ಯಾವುದೇ **Verification** ಮಾಡಲಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.**

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.